**ದಿನಾಂಕ 16.06.2016ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ 16ನೇ ರಾಜ್ಯ ಮಟ್ಟದ ಪಿಪಿಪಿ ಯೋಜನೆಗಳ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದವರ ಪಟ್ಟಿಯನ್ನು ಲಗತ್ತಿಸಿದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ವಿಷಯಗಳನ್ನು ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

**ವಿಷಯ 1: ದಿನಾಂಕ 23.05.2015ರಂದು ಜರುಗಿದ 15ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು ಹಾಗೂ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಪರಿಶೀಲನೆ.**

ದಿನಾಂಕ 23.05.2015ರಂದು ಜರುಗಿದ 15ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಗಳನ್ನು ಓದಲಾಯಿತು. ಹಿಂದಿನ ಸಭೆಯಲ್ಲಿ ಮಂಡಿಸಲಾದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಿತಿಯ ಗಮನಕ್ಕೆ ತರಲಾಯಿತು. ಸಭೆಯ ನಡವಳಿಗಳ ಮೇಲೆ ಯಾವುದೇ ಇಲಾಖೆಗಳಿಂದ ಸಲಹೆಗಳು ಬಾರದೇ ಇರುವುದರಿಂದ ಸಮಿತಿಯು ಸಭೆಯ ನಡವಳಿಗಳನ್ನು ಸ್ಥಿರೀಕರಿಸಿತು.

**ವಿಷಯ 2: ವಾಗ್ದಾರಿ-ರಿಬ್ಬನ್‌ಪಲ್ಲಿ ರಸ್ತೆಯ ಅಭಿವೃದ್ಧಿ ಯೋಜನೆಗೆ ನಾಲ್ಕನೆ ಕಂತಿನ ಕರ್ನಾಟಕ ವಯಬಲಿಟಿ ಗ್ಯಾಪ್ ಫಂಡ್[ಕೆವಿಜಿಎಫ್] ಅನುದಾನದ ಬಿಡುಗಡೆ ಕುರಿತು.**

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ಇವರು **ರೂ.238.58 ಕೋಟಿ** ಯೋಜನಾ ವೆಚ್ಚದಲ್ಲಿ ವಾಗ್ದಾರಿ-ರಿಬ್ಬನ್‌ಪಲ್ಲಿ ರಸ್ತೆಯ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ರಸ್ತೆಯು ದಿನಾಂಕ 18.08.2012ರಿಂದ ಸಾರ್ವಜನಿಕ ಸೇವೆಗೆ ಲಭ್ಯವಾಗಿದೆ; ಭಾರತ ಸರ್ಕಾರದ ವಯಬಲಿಟಿ ಗ್ಯಾಪ್ ಫಂಡ್ ಯೋಜನೆಯಡಿ ಮಂಜೂರಾದ ಒಟ್ಟು **ರೂ. 47.71 ಕೋಟಿ** ಅನುದಾನವು ಪೂರ್ಣವಾಗಿ ಅನುಷ್ಠಾನದ ಅವಧಿಯಲ್ಲಿ ಬಿಡುಗಡೆಯಾಗಿದ್ದು, ರಾಜ್ಯ ಸರ್ಕಾರದಿಂದ ಕರ್ನಾಟಕ ವಯಬಲಿಟಿ ಫಂಡ್ ಯೋಜನೆಯಡಿ ಅನುಮೋದನೆಯಾದ **ರೂ.42.95 ಕೋಟಿ** ಮೊತ್ತವನ್ನು ರಸ್ತೆಯ ನಿರ್ವಹಣಾ ಅವಧಿಯಲ್ಲಿ ಐದು ವಾರ್ಷಿಕ ಕಂತುಗಳಲ್ಲಿ ಬಿಡುಗಡೆ ಮಾಡಬೇಕಿದ್ದು, ಈಗ ನಾಲ್ಕನೆ ಕಂತಿನ ಕೆವಿಜಿಎಫ್ ಅನುದಾನ ರೂ.9.50 ಕೋಟಿಯನ್ನು 2016-17ನೇ ಸಾಲಿನಲ್ಲಿ ಬಿಡುಗಡ ಮಾಡಲು ಅರ್ಹತೆ ಹೊಂದಿರುತ್ತದೆ ಎಂದು

ಸಭೆಯಲ್ಲಿ ವಿವರಿಸಿದರು. ರಿಯಾಯಿತಿದಾರರಾದ ಮೆ. ಜಿವಿಆರ್‌ಎಂಪಿ ವಾಗ್ದಾರಿ–ರಿಬ್ಬನ್‌ಪಲ್ಲಿ ಟೋಲ್‌ವೇ ಪ್ರೈ. ಲಿ. ಇವರು ರಿಯಾಯಿತಿ ಕರಾರಿನ ಒಪ್ಪಂದದ ನಿಯಮಗಳನುಸಾರ ಸುಗಮ ವಾಹನ ಸಂಚಾರಕ್ಕೆ ರಸ್ತೆಯನ್ನು ಉತ್ತಮ ಮಟ್ಟದಲ್ಲಿ ಕಾಯ್ದುಕೊಂಡು ಹೋಗುವ ಬಗ್ಗೆ ಪ್ರತಿ ವರ್ಷ ಕೆಆರ್‌ಡಿಸಿಎಲ್‌ವತಿಯಿಂದ ನಿರ್ವಹಣಾ ಪ್ರಮಾಣ ಪತ್ರವನ್ನು ನೀಡಲಾಗಿದೆಯೆಂದೂ ಹಾಗೂ ಯಾವುದೇ ತೊಂದರೆ ಇಲ್ಲದೆ ಸದರಿ ರಸ್ತೆಯಲ್ಲಿ ಸಾರ್ವಜನಿಕರು ಸಂಚಾರವನ್ನು ಸುಗಮವಾಗಿ ಮಾಡುತ್ತಿದಾರೆಂದು ತಿಳಿಸಿದರು.

ಚರ್ಚೆಯ ನಂತರ, ಕೆ.ವಿ.ಜಿ.ಎಫ್. ಮಾರ್ಗಸೂಚಿಯನ್ವಯ ಮತ್ತು ಪೂರಕ ಒಪ್ಪಂದದನ್ವಯ ಕೆ.ವಿ.ಜಿ.ಎಫ್. ನಾಲ್ಕನೆ ಕಂತಿನ ಅರ್ಹ ಅನುದಾನ **ರೂ. 9.50 ಕೋಟಿ**[ಒಂಭತ್ತು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ] ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿತು.

**ವಿಷಯ 3: ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.**

ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು. ಅಂದಾಜು ಯೋಜನಾ ವೆಚ್ಚವು **ರೂ.85.35 ಕೋಟಿ** ಇದ್ದು, ಯೋಜನೆಯಲ್ಲಿ public parks, education tie-ups, musical fountain, adventure and water sports, budget hotel ಗಳನ್ನು DBFOT (Design, Build, Finance, Operate & Transfer) ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದೆಂದು ಮತ್ತು ಪ್ರಸ್ತುತ ಯೋಜನೆಯಿಂದ ಸ್ಥಳೀಯ ಪ್ರವಾಸೋದ್ಯಮದ ಅಭಿವೃದ್ಧಿಯಾಗುತ್ತದೆಯೆಂದು ತಿಳಿಸಿದರು.

ಚರ್ಚೆಯ ನಂತರ, ಯೋಜನೆಯ ಕಾರ್ಯಸಾಧ್ಯತಾ ವರದಿ, ಬಿಡ್ ಡಾಕ್ಯುಮೆಂಟ್‌ಗಳನ್ನು ತಯಾರಿಸಿ ನಿಯಮಾನುಸಾರ, ಸಚಿವ ಸಂಪುಟ ಮತ್ತು ಇತರ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸಮಿತಿಯು ತಾತ್ವಿಕವಾಗಿ ಒಪ್ಪಿತು. ಮುಂದುವರೆದು, ಯೋಜನಾ ವೆಚ್ಚವು ರೂ.50.00 ಕೋಟಿಗಳನ್ನು ಮೀರಿರುವುದರಿಂದ ಪ್ರಸ್ತಾವನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ (State High Level Clearance Committee) ಅನುಮೋದನೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ವಿಷಯ 4: ಬೆಳಗಾವಿ ಜಿಲ್ಲೆಯ ಹಿಡಕಲ್ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು. ಅಂದಾಜು ಯೋಜನಾ ವೆಚ್ಚವು ರೂ.57.46 ಕೋಟಿ ಇದ್ದು, ಪ್ರಸ್ತುತ ಯೋಜನೆಯಲ್ಲಿ public parks, education tie-ups, light show, Agri-tourism park, adventure theme park, resort and retail (F&B)ಗಳನ್ನು DBFOT (Design, Build, Finance, Operate & Transfer) ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದೆಂದು ಮತ್ತು ಪ್ರಸ್ತುತ ಯೋಜನೆಯಿಂದ ಸ್ಥಳೀಯ ಪ್ರವಾಸೋದ್ಯಮದ ಅಭಿವೃದ್ಧಿಯಾಗುತ್ತದೆಯೆಂದು ತಿಳಿಸಿದರು.

ಚರ್ಚೆಯ ನಂತರ, ಯೋಜನೆಯ ಕಾರ್ಯಸಾಧ್ಯತಾ ವರದಿ, ಬಿಡ್ ಡಾಕ್ಯುಮೆಂಟ್‌ಗಳನ್ನು ತಯಾರಿಸಿ ನಿಯಮಾನುಸಾರ, ಸಚಿವ ಸಂಪುಟ ಮತ್ತು ಇತರ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸಮಿತಿಯು ತಾತ್ವಿಕವಾಗಿ ಒಪ್ಪಿತು. ಮುಂದುವರೆದು, ಯೋಜನಾ ವೆಚ್ಚವು ರೂ.50.00 ಕೋಟಿಗಳನ್ನು ಮೀರಿರುವುದರಿಂದ ಪ್ರಸ್ತಾವನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ (State High Level Clearance Committee) ಅನುಮೋದನೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ವಿಷಯ 5 : ಬೆಳಗಾವಿ ಜಿಲ್ಲೆಯ ಮಲಪ್ರಭಾ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು. ಅಂದಾಜು ಯೋಜನಾವೆಚ್ಚವು ರೂ. 12.83 ಕೋಟಿ ಇದ್ದು, ಪ್ರಸ್ತುತ ಯೋಜನೆಯಲ್ಲಿ public parks, education tie-ups, adventure and water sports, budget hotel ಗಳನ್ನು DBFOT (Design, Build, Finance,

Operate & Transfer) ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದೆಂದು ಮತ್ತು ಪ್ರಸ್ತುತ ಯೋಜನೆಯಿಂದ ಸ್ಥಳಿಯ ಪ್ರವಾಸೋದ್ಯಮದ ಅಭಿವೃದ್ಧಿಯಾಗುತ್ತದೆಯೆಂದು ತಿಳಿಸಿದರು.

ಚರ್ಚೆಯ ನಂತರ, ಯೋಜನೆಯ ಕಾರ್ಯಸಾಧ್ಯತಾ ವರದಿ, ಬಿಡ್ ಡಾಕ್ಯುಮೆಂಟ್‌ಗಳನ್ನು ತಯಾರಿಸಿ ನಿಯಮಾನುಸಾರ, ಸಚಿವ ಸಂಪುಟ ಮತ್ತು ಇತರ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸಮಿತಿಯು ತಾತ್ವಿಕವಾಗಿ ಅನುಮೋದನೆ ನೀಡಿತು.

**ವಿಷಯ 6: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿವತಿಯಿಂದ ಪಿಪಿಪಿ ಮಾದರಿಯಲ್ಲಿ ಆರು ಯೋಜನೆಗಳ ಅಭಿವೃದ್ಧಿ**

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿವತಿಯಿಂದ ಕೆಳಕಂಡ ಆರು ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಗುರುತಿಸಲಾಗಿದೆಯೆಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ಇವರು ಸಭೆಗೆ ತಿಳಿಸಿದರು.

ಹಂತ-1:

1. Blown films used in packing of milk in poly pouches and Flexi pouches etc., of capacity 800 to 1000 MTs per month at Chellagatta, Bengaluru.
2. Automated corrugated boxes making plant of capacity of 1500 MTs per month at Chellagatta, Bengaluru.
3. Deep Freezer of capacity 2000 / 3000 MT at Chennarayapatna.

ಹಂತ-2:

4. Automated Milk Conversion Plants (Powder Plant: 100 MTs per. day capacity) at Dharwad.
5. Automated (2 Nos.) Mega cattle feed manufacturing plants of capacity 500 MT per day each at Mandya & Kolar.
6. Ultra High Treated (UHT) – Health Drink project at Mandya (30,000 bottles per hour).

ಈ ಯೋಜನೆಗಳಿಗೆ ಟ್ರಾನ್ಸಾಕ್ಷನ್ ಅಡ್ವೈಸರ್ ಆಗಿ ಮೆ. ಧಾರಾಷಾ ಅಂಡ್ ಕಂಪನಿ ಪ್ರೈ ಲಿ. ಇವರನ್ನು ಆಯ್ಕೆಮಾಡಲಾಗಿದ್ದು, ಮೇಲ್ಕಂಡಂತೆ ಎರಡು ಹಂತಗಳಲ್ಲಿ ಕಾರ್ಯಸಾಧ್ಯತಾ ವರದಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆಯೆಂದು ತಿಳಿಸಿದರು. ಸಲಹೆಗಾರರ ಶುಲ್ಕವು ಒಟ್ಟು

ರೂ.95,96,245/- (ತೆರಿಗೆ ಒಳಗೊಂಡು) ಇದ್ದು, ಸದರೀ ಮೊತ್ತವನ್ನು ಕೆ.ಎಂ.ಎಫ್.ನಿಂದ ಭರಿಸಲು ಸಾಧ್ಯವಾಗದೇ ಇರುವುದರಿಂದ ಇದನ್ನು ಸರ್ಕಾರದಿಂದ ಭರಿಸಲು ವಿನಂತಿಸಿದರು.

ಸಲಹೆಗಾರರ ಶುಲ್ಕದ ಮೊತ್ತವನ್ನು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಲಭ್ಯವಿರುವ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ 3451-00-090-1-06-059-ಮೂಲಭೂತ ಸೌಕರ್ಯಗಳು-ಆರಂಭಿಕ ಅಧ್ಯಯನಗಳು-ಇತರೆ ಖರ್ಚುಗಳು ಇದರಿಂದ ಭರಿಸಬಹುದಾಗಿದೆಯೆಂದು ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರು ಸಭೆಗೆ ತಿಳಿಸಿದರು. ಮುಂದುವರೆದು, ಸಲಹೆಗಾರರ ಶುಲ್ಕವನ್ನು Term of Referenceನಲ್ಲಿ ತಿಳಿಸಿರುವ ಕೆಳಕಂಡ ವೇಳಾಪಟ್ಟಿಯಂತೆ ಕಂತುಗಳಲ್ಲಿ ಕೆಎಂಎಫ್‌ಗೆ ಬಿಡುಗಡೆ ಮಾಡಬೇಕಾಗುವುದೆಂದು ತಿಳಿಸಿದರು.

ಪ್ರಸ್ತುತ ಯೋಜನೆಯನ್ನು ಪಿಪಿಪಿ DBFOT (Design, Build, Finance, Operate & Transfer) ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಮತ್ತು ಸಲಹೆಗಾರರ ಶುಲ್ಕದ ಮೊತ್ತವನ್ನು Term of Referenceನಲ್ಲಿ ತಿಳಿಸಿರುವ ವೇಳಾಪಟ್ಟಿಯಂತೆ ಕಂತುಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ 2016-17ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 3451-00-090-1-06-059- ಮೂಲಭೂತ ಸೌಕರ್ಯಗಳು-ಆರಂಭಿಕ ಅಧ್ಯಯನಗಳು-ಇತರೆ ಖರ್ಚುಗಳು[ಯೋಜನೆ] ಅಡಿ ಒದಗಿಸಿರುವ ಅನುದಾನದಿಂದ ಕೆಎಂಎಫ್‌ಗೆ ಬಿಡುಗಡೆ ಮಾಡಲು ಅನುಮೋದನೆಯನ್ನು ಸಭೆಯಲ್ಲಿ ನೀಡಲಾಯಿತು.

ಮುಂದುವರೆದು, ಪ್ರಸ್ತಾವಿತ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲು ಸೂಚಿಸಲಾಯಿತು.

ವಿಷಯ 7: ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ ವತಿಯಿಂದ ಪ್ರಸ್ತಾವಿಸಲಾದ 'ಉಗ್ರಾಣದ ಕಟ್ಟಡಗಳ ಛಾವಣಿಗಳ ಮೇಲೆ ಸೋಲಾರ್ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸುವ ಯೋಜನೆ'

ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ ಸಂಸ್ಥೆಯವತಿಯಿಂದ ಒಟ್ಟು ರೂ. **1295.84 ಕೋಟಿ** ಅಂದಾಜು ಯೋಜನಾವೆಚ್ಚದಲ್ಲಿ ಪ್ರಸ್ತಾವಿಸಲಾದ 'ಉಗ್ರಾಣದ ಕಟ್ಟಡಗಳ ಛಾವಣಿಗಳ ಮೇಲೆ ಸೋಲಾರ್ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸುವ ಯೋಜನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು.

ಯೋಜನೆಯ ಅನುಷ್ಠಾನವನ್ನು ತ್ವರಿತವಾಗಿ ಕೈಗೊಳ್ಳಲನುವಾಗುವಂತೆ, ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಬಿಡ್‌ಗಳನ್ನು ಆಹ್ವಾನಿಸಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.

ಇಂತಹ ಮಹತ್ವದ ಯೋಜನೆಗೆ ಟೆಂಡರ್ ಆಹ್ವಾನಿಸುವ ಪೂರ್ವದಲ್ಲಿ, ನಿಯಮಾನುಸಾರ ಸಚಿವ ಸಂಪುಟದ ಮುಂದೆ ಮಂಡಿಸಿ, ಯೋಜನೆಯನ್ನು ಕೈಗೆತ್ತಿಕೊಳ್ಳಲು ಒಪ್ಪಿಗೆ ಪಡೆದು, ವಿವರವಾದ ಯೋಜನಾ ವರದಿಯೊಂದಿಗೆ ಅನುಷ್ಠಾನಗೊಳಿಸುವ ನಿಟ್ಟನಲ್ಲಿ ಕ್ರಮವಹಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ ಮತ್ತು ಸಹಕಾರ ಇಲಾಖೆಯ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

**ಹೆಚ್ಚುವರಿ ವಿಷಯ 1: ಹಾಸನ ಜಿಲ್ಲೆಯ ಗೊರೂರು ಅಣೆಕಟ್ಟಿನ ಹತ್ತಿರ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.**

ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಹೆದ್ದಾರಿ-21ರಲ್ಲಿ, ಹಾಸನ ಪಟ್ಟಣದಿಂದ 22ಕಿ.ಮೀ. ದೂರದಲ್ಲಿರುವ ಗೊರೂರುನಲ್ಲಿ ಹೇಮಾವತಿ ನದಿಗೆ ಕಟ್ಟಿರುವ ಅಣೆಕಟ್ಟಿನ ಸಮೀಪ ಪ್ರವಾಸಿಗರಿಗೆ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು. ಅಂದಾಜು ಯೋಜನಾ ವೆಚ್ಚವು **ರೂ.80.74 ಕೋಟಿ** ಇದ್ದು, ಯೋಜನೆಯಲ್ಲಿ ಆಥಿತ್ಯ ಮತ್ತು ಮನರಂಜನೆ(Hospitality and Amusement Park) ಸೌಲಭ್ಯಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದೆಂದು ಮತ್ತು ಪ್ರಸ್ತುತ ಯೋಜನೆಯಿಂದ ಸ್ಥಳೀಯ ಪ್ರವಾಸೋದ್ಯಮದ ಅಭಿವೃದ್ಧಿಯಾಗುತ್ತದೆಯೆಂದು ತಿಳಿಸಿದರು.

ಚರ್ಚೆಯ ನಂತರ, ಯೋಜನೆಯ ಕಾರ್ಯಸಾಧ್ಯತಾ ವರದಿ, ಬಿಡ್ ಡಾಕ್ಯುಮೆಂಟ್‌ಗಳನ್ನು ತಯಾರಿಸಿ ನಿಯಮಾನುಸಾರ, ಸಚಿವ ಸಂಪುಟ ಮತ್ತು ಇತರ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸಮಿತಿಯು ತಾತ್ವಿಕವಾಗಿ ಒಪ್ಪಿತು. ಮುಂದುವರೆದು, ಯೋಜನಾ ವೆಚ್ಚವು ರೂ.50.00 ಕೋಟಿಗಳನ್ನು ಮೀರಿರುವುದರಿಂದ ಪ್ರಸ್ತಾವನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ಅನುಮೋದನೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ಹೆಚ್ಚುವರಿ ವಿಷಯ-2: ಮೈಸೂರು ಜಿಲ್ಲೆಯ ಕಬಿನಿ ಜಲಾಶಯದ ಹಿನ್ನೀರಿನಲ್ಲಿ 'ಕಬಿನಿ ವನಸಿರಿ' ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಜಿಲ್ಲೆಯ ಹೆಚ್. ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಹಿನ್ನೀರಿನಲ್ಲಿ 'ಕಬಿನಿ ವನಸಿರಿ' ಹೆಸರಿನಲ್ಲಿ ಪ್ರವಾಸಿಗರಿಗೆ ಪ್ರವಾಸೋದ್ಯಮ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯ ಕುರಿತು ಪ್ರಾತ್ಯಕ್ಷತೆಯನ್ನು ಸಭೆಯಲ್ಲಿ ನೀಡಿದರು. ಅಂದಾಜು ಯೋಜನಾ ವೆಚ್ಚವು ರೂ.54.57 ಕೋಟಿ ಇದ್ದು, ಯೋಜನೆಯಲ್ಲಿ Food Park, Public Park and Water based activities ಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದೆಂದು ಮತ್ತು ಪ್ರಸ್ತುತ ಯೋಜನೆಯಿಂದ ಸ್ಥಳೀಯ ಪ್ರವಾಸೋದ್ಯಮದ ಅಭಿವೃದ್ಧಿಯಾಗುತ್ತದೆಯೆಂದು ತಿಳಿಸಿದರು.

ಚರ್ಚೆಯ ನಂತರ, ಯೋಜನೆಯ ಕಾರ್ಯಸಾಧ್ಯತಾ ವರದಿ, ಬಿಡ್ ಡಾಕ್ಯುಮೆಂಟ್‌ಗಳನ್ನು ತಯಾರಿಸಿ ನಿಯಮಾನುಸಾರ, ಸಚಿವ ಸಂಪುಟ ಮತ್ತು ಇತರ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸಮಿತಿಯು ತಾತ್ವಿಕವಾಗಿ ಒಪ್ಪಿತು. ಮುಂದುವರೆದು, ಯೋಜನಾ ವೆಚ್ಚವು ರೂ.50.00 ಕೋಟಿಗಳನ್ನು ಮೀರಿರುವುದರಿಂದ ಪ್ರಸ್ತಾವನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ಅನುಮೋದನೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

21.6.16

[ಅರವಿಂದ ಜಾಧವ್]
ಸರ್ಕಾರದ ಮುಖ್ಯ ಕಾರ್ಯದರ್ಶಿ

**Annexure**

## Members present in 16th SLSWA Meeting

| Sl. No. | Name, Designation & Organisation |
|---|---|
| 1. | Sri Arvind Jadhav, IAS<br>Chief Secretary to Govt. of Karnataka ... In the Chair |
| 2. | Smt. Latha Krishna Rao .G, IAS<br>Additional Chief Secretary & Development Commissioner, Govt. of Karnataka |
| 3. | Sri D.V. Prasad, IAS<br>Additional Chief Secretary to Govt., Commerce and Industries Department |
| 4. | Smt. Vandita Sharma, IAS<br>Additional Chief Secretary to Govt., Infrastructure Development Department |
| 5. | Sri I.S.N. Prasad, IAS<br>Additional Chief Secretary to Govt., Finance Department |
| 6. | Sri Lakshminarayana. M<br>Principal Secretary to Govt., Public Works, Ports & Inland Water Transport Dept. |
| 7. | Sri Rakesh Singh, IAS<br>Principal Secretary to Govt., Water Resources Dept. |
| 8. | Smt. Uma Mahadevan, IAS<br>Principal Secretary to Govt., Planning, Programme Monitoring and Statistics Dept. |
| 9. | Sri N. Chandrasekhar,<br>Director, PPP Cell, Infrastructure Development Department |
| 10. | Sri R. Rudraiah,<br>Managing Director, Karnataka Neeravari Nigama Ltd. |
| 11. | Sri T.N. Chikkarayappa<br>Managing Director, Cauvery Neeravari Nigama Ltd. |
| 12. | Sri K.S. Krishna Reddy<br>Managing Director, Karnataka Road Development Corporation Ltd. |
| 13. | Sri Rajeshgowda. M. B, KAS<br>Managing Director, Karnataka State Warehousing Corporation Ltd. |
| 14. | Sri S.S. Viraktamath<br>Deputy Secretary, Co-operation Department. |
| 15. | Sri B.M. Sureshkumar<br>Director (Eng), Karnataka Co-operative Milk Producer's Federation Ltd. |
| 16. | Sri Rajeshkumar. S. Biradar<br>Executive Engineer, Energy Dept. |
| 17. | Sri Shashikant Warad,<br>Senior Programmer, PPP Cell, Infrastructure Development Department |
| 18. | Smt. K.R.Nalini<br>Assistant Director, PPP Cell, Infrastructure Development Department |
| 19. | Smt. K.R.Devika,<br>Assistant Director, PPP Cell, Infrastructure Development Department |
| 20. | Sri Mallikarjun Allipur<br>Asst. Executive Engineer, Karnataka State Warehousing Corporation Ltd. |
| 21. | Sri R. Ganesh<br>Associate Vice President, IDeCK |